ಶ್ರೀ ಬಿ. ಎ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಪ್ರತಿಯೊಬ್ಬರೂ ಕೂಡ, ಈ ಕರಕುಶಲ ನಿಗಮದಲ್ಲಿ ಆವರವರ ಹೆಸರನ್ನು ನೊಂದಾಯಿಸಿ ಕೊಳ್ಳಬೇಕು. ಇದರ ಬಗ್ಗೆ ಕಳೆದ ವರ್ಷ ನನ್ನ ಕಛೇರಿಯಲ್ಲಿ ಒಂದು ಮೀಟಿಂಗನ್ನು ಕರೆದಿದ್ದೆ. ಆ ಮೀಟಿಂಗ್‌ನಲ್ಲೂ ಕೂಡ ನಾವೆಲ್ಲರೂ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಈ ಕರಕುಶಲ ಅಭಿವೃದ್ಧಿ ನಿಗಮಕ್ಕೆ ಬೇಟೆ ಮರ ಮತ್ತು ತೆಗದ ವಂರವನ್ನು ಬಿಡುಗಡೆ ಮಾಡುತ್ತೇವೆ. ಈಗ ನಾವು ಏನು ಮಾಡುತ್ತೇವೆಂದರೆ ಅಲ್ಲಿ ಎರಡು ಮರದ ಡಿಪೋಗಳು ಇವೆ. ಈ ಎರಡು ಡಿಪೋಗಳಲ್ಲಿ ಮರಗಳನ್ನು ಹರಾಜು ಹಾಕುತ್ತೇವೆ. ಆ ಡಿಪೋಗಳಲ್ಲಿ ಹರಾಜಿನ ಮೂಲಕ ಮರಗಳನ್ನು ಪಡೆಯುತ್ತಿದ್ದರು. ಈಗ ಮರವನ್ನು ಮಾರುವ ವ್ಯವಸ್ಥೆಯನ್ನು ಕರಕುಶಲ ನಿಗಮದ ಮೂಲಕ ಮಾಡುತ್ತಿದ್ದೇವೆ. ನಾವು ಈ ರೀತಿ ಮಾರಾಟ ಮಾಡದೆ ಪರ್‌ಮಿಟ್‌ಗಳನ್ನು ವ್ಯಾಪಾರಗಾರರಿಗೆ ಕೊಟ್ಟರೆ ಸ್ಮಗಲಿಂಗ್ ಪ್ರಾರಂಭವಾಗುತ್ತದೆ. ಆದಂದರಿಂದ ನಾವು ಈ ರೀತಿ ಮಾರುತ್ತಿದ್ದೇವೆ.

SMT. MUKTHAR UNNISA.— This is my suggestion. Even you can allow the co-operative sector i. e., handicrafts co-operative sector where there is no handicrafts development corporation. You can distribute directly to the shops, because even the small shop keepers are taking from the main businessmen. I think only a handful are there in Mysore. I am explaining this about Mysore. I do not know anything about other districts. My request is that if you recognise the registered small artisans, they will have some facilities to get loans and subsidy. That is important for a small artisan. Thank you.

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿಯೂ ಸಹ ಕರಕುಶಲ ಅಭಿವೃದ್ಧಿ ನಿಗಮದ ಕಛೇರಿ ಇದೆ. ಅಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಬಹುದು. ನಾವು ಕರಕುಶಲ ಅಭಿವೃದ್ಧಿ ನಿಗಮಕ್ಕೆ ಗಂಧವನ್ನು ಹಾಗೂ ದಂತವನ್ನು ಸಪ್ಲೈ ಮಾಡುತ್ತೇವೆ. ಇಷ್ಟವುಳ್ಳವರು ಅಲ್ಲಿಂದ ಪಡೆಯಬಹುದು.

ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲುಮಡ್ಡಿ ಯೋಜನೆ.

೨೯೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ ಕಾಡಾ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ವಿಶ್ವ ಬ್ಯಾಂಕಿನ ಸಹಾಯದಿಂದ ಈಗಾಗಲೇ ೧೦ ಲಕ್ಷಕ್ಕೂ ಮೇಲೆ ಖರ್ಚು ಮಾಡಿ ಕಲ್ಲು ಪಡ್ಡು ಯೋಜನೆ ಪ್ರಾರಂಭವಾಗಿ ಕೆಲಸ ನಿಂತಿರುವುದು ನಿಜವೇ ?

ಆ) ವಿಧಾನ ಸಭೆಯಲ್ಲಿ ಸಂಬಂಧಪಟ್ಟ ಸಚಿವರು ಈ ಮುನ್ನ ತಕ್ಷಣ ಈ ಕೆಲಸ ಪ್ರಾರಂಭಿಸುವುದಾಗಿ ಆಶ್ವಾಸನೆ ಕೊಟ್ಟಿದ್ದು ಈವರೆಗೆ ಈ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಇ) ತಾಲ್ಲೂಕಿನ ರೈತರಿಗೆ ತುಂಬಾ ಅನುಕೂಲವಾಗುವ ಈ ಯೋಜನೆ ಈಗಲಾದರೂ ಪ್ರಾರಂಭವಾಗುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿ).—

ಅ) ನಿಜ.

ಆ) ಯೋಜನಾ ವರದಿಯು ಪರಿಶೀಲನಾ ಹಂತದಲ್ಲಿದೆ.

ಇ) ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಾನು ಈ ವಿಷಯದ ಬಗ್ಗೆ ಹೆಚ್ಚು ಪ್ರಶ್ನೆಯನ್ನು ಕೇಳುವುದಿಲ್ಲ. ಒಂದೇ ಒಂದು ಪ್ರಾರ್ಥನೆ ತಮ್ಮಲ್ಲಿ ಏನು ಅಂದರೆ ಶಿಕಾರಿಪುರ ತಾಲ್ಲೂಕಿನ ಸುಮಾರು ೪೦ ಹಳ್ಳಿಗಳ ರೈತರಿಗೆ ಈ ಯೋಜನೆಯಿಂದ ತುಂಬಾ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆ ಪ್ರದೇಶದಲ್ಲಿ ಅಂದರೆ ಅರಣ್ಯ ಪ್ರದೇಶದಲ್ಲಿ ಕೆಲವು ಹಳೆಯ ಮರಗಳು ಮಾತ್ರ ಇವೆ. ಇದ್ದ ಸಣ್ಣಪುಟ್ಟ ಮರಗಳನ್ನು ಈಗಾಗಲೇ ಕಡಿದು ಒಟ್ಟಿದ್ದಾರೆ. ಈ ನೀರಾವರಿ ಯೋಜನೆಯನ್ನು ಮಾಡಿಕೊಟ್ಟಲ್ಲಿ ಸುಮಾರು ಎರಡುವರೆ ಸಾವಿರ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿಯು ಅನುಕೂಲವು ಲಭ್ಯವಾಗುತ್ತದೆ. ಈ ಸಭೆಯಲ್ಲಿ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ತತ್‌ಕ್ಷಣ ಈ ಕೆಲಸವನ್ನು ಪ್ರಾರಂಭಿಸುವುದಾಗಿ ಕಳೆದ ಅಧಿವೇಶನದ ಕಾಲದಲ್ಲಿ ಭರವಸೆ ಕೊಟ್ಟಿದ್ದರು ಈಗಲಾದರೂ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಾ ?

ಅಧ್ಯಕ್ಷರು.—ಆ ಯೋಜನೆಗೆ ಈಗಾಗಲೇ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗಲಾದರೂ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದರೆ ಸಾಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಯೋಜನೆಯ ಬಗ್ಗೆ ಮಾನ್ಯ ಸದಸ್ಯರ ಕಳಕಳಿ ಮತ್ತು ತಮ್ಮ ಕಳಕಳಿಯೂ ಇದೆ ಎಂದು ನಮಗೆ ಅರ್ಥವಾಯಿತು. ಆದರೆ ಈ ಯೋಜನೆಯನ್ನು ಮಾಡಲಿಕ್ಕೆ ನಮಗೆ ಅಡ್ಡ ಇರುವುದು ಕೇಂದ್ರ ಸರಕಾರ. ನಮ್ಮ ಕೇಂದ್ರ ಸರಕಾರದವರು ಇತ್ತೀಚೆಗೆ ತಮ್ಮ ಹೊಸ ಅರಣ್ಯ ನೀತಿಯನ್ನು ಏನು ಘೋಷಣೆ ಮಾಡಿದ್ದಾರೆ ಅದು ಅತ್ಯಂತ ಕಠಿಣವಾದುದಾಗಿದೆ. ಒಂದು ಹೆಕ್ಟೇರ್ ಅರಣ್ಯ ಭೂಮಿಯನ್ನೂ ಬಿಡುವುದಿಲ್ಲ ಎಂದು ಪ್ರಧಾನಿಯವರು ಘೋಷಣೆ ಮಾಡಿದ್ದಾರೆ. ಆದರೂ ಕೂಡಾ ನಾವೆಲ್ಲರೂ ಸೇರಿ ಒಟ್ಟಾಗಿ ಈ ಯೋಜನೆಯನ್ನು ಮಾಡಲು ಪ್ರಯತ್ನ ಮಾಡೋಣ.

ಅಧ್ಯಕ್ಷರು.—ಈಗ ಕೆಲಸವು ಏಕೆ ನಿಂತಿದೆ ಎಂದು ಹೇಳಿ. ಕೇಂದ್ರ ಸರಕಾರವು ಕಾರಣ ಅಲ್ಲ ಎಂದು ಸದಸ್ಯರ ಅಭಿಪ್ರಾಯ ಇರಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಯೋಜನೆಯಿಂದ ಎರಡೂವರೆ ಸಾವಿರ ಹೆಕ್ಟೇರ್ ಭೂಮಿಗೆ ಅನುಕೂಲವಾಗುತ್ತದೆ ಎಂದು ತಾವುಗಳು ಹೇಳಿದ್ದೀರಿ. ಆದರೆ ಯೋಜನೆಯನ್ನು ಕಾರ್ಯಗತ ಮಾಡಲಿಲ್ಲ. ಅಲ್ಲಿಯ ಜನರು ನನಗೆ ಶಾಪ ಹಾಕುತ್ತಿದ್ದಾರೆ. ಆ ಜನಗಳ ಶಾಪಕ್ಕೆ ನಾನು ತುತ್ತಾಗಿದ್ದೇನೆ. ದಯವಿಟ್ಟು ತಾವುಗಳು ಆ ಕೆಲಸವನ್ನು ಮಾಡಿಸಿಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ಈ ಕುರಿತಾಗಿ ಇಷ್ಟು ಮಾತ್ರ ಹೇಳಬಯಸುತ್ತೇನೆ, ರಾಜ್ಯ ಸರಕಾರದ ನಿಲುವು ಜನತೆಗೆ ವಿರೋಧವಾಗಿ ಇರತಕ್ಕಂತಹ ನಿಲುವು ಆಗಲಾರದು ಎಂದು ಭರವಸೆ ಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಗೈರು ಹಾಜರಿ.

ಅರಣ್ಯ ಆಧಾರಿತ ಕೈಗಾರಿಕೆಗಳು.

೧೧೯. ಶ್ರೀ ಮಹಮದ್ ವೈ.ನುದ್ದೀನ್(ಚಾಮರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಅರಣ್ಯಾಧಾರಿತ ಉದ್ದಿಮೆಗಳ ಅಗತ್ಯಗಳನ್ನು ಪೂರೈಸಲು ಅರಣ್ಯೀಕರಣಗೊಳಿಸಲ್ಪಟ್ಟ ಜಮೀನು,

ಆ) ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಅರಣ್ಯಾಧಾರಿತ ಉದ್ದಿಮೆಗಳಿಂದ ಅವರಿಗೆ ಕಚ್ಚಾ ವಸ್ತುಗಳನ್ನು ಪೂರೈಸಲು ನಡುತೋಪುಗಳನ್ನು ಬೆಳೆಸಲು ಅವರಿಂದ ಗಿಟಿಕಿರಿಂದ ಪಡೆಯಲಾದ ಹಣಗಳ ವಿವರಗಳನ್ನು ಪ್ರತಿ ವರ್ಷಗಳಿಗೆ ಪ್ರತ್ಯೇಕವಾಗಿ ಕೊಡುವುದು ಮತ್ತು